ನರಸೀಪುರದಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಏನು ಕಾಂಟ್ರಿಬ್ಯೂಷನ್ ಡಿಪಾಸಿಟ್ ಮಾಡಿರುತ್ತಾರೆ ಅದನ್ನು ರೈಸ್‌ಮಾಡುವುದಕ್ಕೆ ಸರ್ಕಾರ ಸಿಫಾರಸ್ಸು ಮಾಡಿದ್ದಾರೆ. ಅಲ್ಲದೆ ಸಾರ್ವಜನಿಕರೂ ಸ್ಕೂಲ್ ಬಿಲ್ಡಿಂಗ್‌ಗಾಗಿ ಜಾಗವನ್ನೂ ಕೂಡ ವಂತಿಗೆಯಾಗಿ ಕೊಟ್ಟಿರುತ್ತಾರೆ. ತಾವು ಈಗ ಏನು ಮೂರು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿರುತ್ತೀರಿ, ಅದು ನನ್ನ ಗಮನಕ್ಕೆ ಬಂದಿರುತ್ತದೆ. ಈ ವರ್ಷ 80 ಸಾವಿರ ರೂಪಾಯಿಗಳ ಪ್ರಾರಂಭ ಹಣವನ್ನು ಏನು ಇಟ್ಟಿದ್ದೇವೆ, ಅದನ್ನು ಅಷ್ಟಕ್ಕೆ ನಿಲ್ಲಿಸುವುದಿಲ್ಲ ಈ ಕೆಲಸವನ್ನು ತೀವ್ರಗತಿಯಲ್ಲಿಯೇ ತೆಗೆದುಕೊಂಡು ಮಾಡುತ್ತೇವೆಂದು ಹೇಳುತ್ತೇನೆ.

ವಿಷಯ : ಆರಸೀಕೆರೆ ಚುನಾವಣೆ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು

ಪ್ರ. ಸಂಖ್ಯೆ 669 (1726) ಶ್ರೀ ಜಿ. ಎಸ್. ಬಸವರಾಜು (ಆರಸೀಕೆರೆ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರಸೀಕೆರೆ ಚುನಾವಣೆ ಕ್ಷೇತ್ರದಲ್ಲಿ 1982-83 ಹಾಗೂ 1983-84ನೇ ಸಾಲುಗಳಲ್ಲಿ ಪೂರ್ತಿಗೊಳಿಸಿರುವ ಸಣ್ಣ ನೀರಾವರಿ ಕಾಮಗಾರಿಗಳ ಸಂಖ್ಯೆ ಎಷ್ಟು ? ಮತ್ತು ಆ ಬಗ್ಗೆ ಖರ್ಚಾಗಿರುವ ಹಣವೆಷ್ಟು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಯಾವ ಕೆಲಸಗಳೂ ಪೂರ್ತಿಯಾಗಿಲ್ಲ. 506 ಸಿ.ಪಿ.ನಲ್ಲಿ ಯಾವ ಹಣವೂ ಖರ್ಚಾಗಿಲ್ಲ.

ಶ್ರೀ ಜಿ. ಎಸ್. ಬಸವರಾಜ್.— ಮಾನ್ಯ ಅಧ್ಯಕ್ಷರೇ, 1982-83-84ನೇ ಸಾಲಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಿಗಾಗಿ ತೆಗೆದುಕೊಂಡ ಕೆಲಸಗಳ ಸಂಖ್ಯೆ ಎಷ್ಟು ? ಖರ್ಚಾಗಿರುವ ಹಣ ಎಷ್ಟು ಎಂದು ಕೇಳಿರುವುದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾ ಯಾವುದೇ ಕೆಲಸಗಳು ಪೂರ್ತಿಯಾಗಿಲ್ಲವೆದು, ಮತ್ತು ಯಾವ ಹಣವೂ ಖರ್ಚಾಗಿಲ್ಲವೆಂದು ಹೇಳಿರುತ್ತಾರೆ. ಇದರಿಂದ ನನ್ನ ಕ್ಷೇತ್ರವನ್ನು ಸಂಪೂರ್ಣವಾಗಿ ಮರೆತುಬಿಟ್ಟಿರುತ್ತಾರೆಂದು ನನಗೆ ಭಾಸವಾಗುವುದು ಆದ್ದರಿಂದ ಮಾನ್ಯ ಮಂತ್ರಿಗಳು 1982-83-84ನೇ ಸಾಲಿಗೆ ಸ್ಪಷ್ಟವಾಗಿ ನನ್ನ ಕ್ಷೇತ್ರಕ್ಕೆ ಒಂದು ರೂಪಾಯಿಗಳನ್ನಾದರೂ ಖರ್ಚು ಮಾಡದಿರಲು ಕಾರಣವೇನೆಂದು ಕೇಳುತ್ತೇನೆ ?

ಶ್ರೀ ಆರ್. ಎಸ್. ಲಕ್ಷ್ಮೀಪತಿ.— ಹೊಸ ಕೆಲಸಗಳನ್ನು ಯಾವುದನ್ನೂ ತೆಗೆದುಕೊಳ್ಳಲು ಅವಕಾಶವಿಲ್ಲ. ಏಕೆಂದರೆ ವಾಣಿವಿಲಾಸ ಕ್ಯಾಚ್‌ಮೆಂಟ್ ಏರಿಯಾ ಬರುತ್ತದೆ. 1982-83ನೇ ಸಾಲಿಗೆ 24 ಕೆಲಸಗಳನ್ನು ತೆಗೆದುಕೊಂಡು ಸಾಕಷ್ಟು ಹಣವನ್ನು ಖರ್ಚುಮಾಡಿದ್ದೇವೆ, ವಾಣಿವಿಲಾಸ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಾಗಲಿ, ಇಂಪ್ರೂವ್‌ಮೆಂಟ್ ಮಾಡತಕ್ಕಂಥದ್ದಾಗಲಿ ತೆಗೆದುಕೊಳ್ಳಬಾರದೆಂದು ಇದೆ, ಆದ್ದರಿಂದ ಈ ಕ್ಷೇತ್ರದಲ್ಲಿ ಬರತಕ್ಕಂಥ ಕೆಲಸಗಳನ್ನು ಯಾವುದನ್ನೂ ಕೂಡ ತೆಗೆದುಕೊಂಡಿಲ್ಲ.

ಶ್ರೀ ಜಿ. ಎಸ್. ಬಸವರಾಜ್ .— ವಾಣಿವಿಲಾಸ ಕ್ಯಾಚ್‌ಮೆಂಟ್ ಏರಿಯಾಕ್ಕೆ ಬಂದರೂ ನಮ್ಮ ಕ್ಷೇತ್ರದಲ್ಲಿ ಬರತಕ್ಕಂಥ 23 ಸಾವಿರ ಎಕರೆಗೆ ನೀರನ್ನು ಕೊಡಬೇಕೆಂದು ಕೇಳುತ್ತಲೇ ಇದ್ದೇವೆ. ಆದ್ದರಿಂದ ವಾಣಿವಿಲಾಸ ಮೈನರ್ ನೀರಾವರಿ ಯೋಜನೆಯ ಕೆಳಗೆ ನಮ್ಮ ತಾಲ್ಲೂಕನ್ನು ರಿಕನ್‌ಸಿಡರ್ ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.— ಮೈನರ್ ಇರಿಗೇಷನ್‌ಗೆ ವಾಣಿವಿಲಾಸ ಸಾಗರದಲ್ಲಿ ಎಷ್ಟು ನೀರನ್ನು ಕೊಡಲು ಸಾಧ್ಯವಾಗಿರುತ್ತದೋ ಅಷ್ಟನ್ನು ಕೊಡುತ್ತಿರುತ್ತೇವೆ, ಮತ್ತೆ ಹೆಚ್ಚಿಗೆ ನೀರಾವರಿ ಮಾಡಬೇಕೆಂದರೆ ನೀರನ್ನು ತಡೆಯಲು ಸಾಧ್ಯವೂ ಇಲ್ಲ, ನೀರನ್ನು ಕೊಡಲೂ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ.

ವಿಷಯ : ಸಾರ್ವಜನಿಕ ವಿದ್ಯಾರ್ಥಿನಿಲಯ ಮತ್ತು ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಬಗ್ಗೆ

ಪ್ರ. ಸಂಖ್ಯೆ 670 (1732) ಶ್ರಿ ಕೆ. ವಿ. ತಿಪ್ಪಯ್ಯ (ಮೂಡಿಗೆರೆ).—

ಅ) ಮೂಡಿಗೆರೆ ತಾಲ್ಲೂಕ್ ಬಣಕಲ್‌ನಲ್ಲಿ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಹಾಗೂ ತರೀಕೆರೆ ತಾಲ್ಲೂಕ್ ಲಕ್ಕವಳ್ಳಿಯಲ್ಲಿ ಒಂದು ಹರಿಜನ ಗಿರಿಜನ ವರ್ಗದ ವಿದ್ಯಾರ್ಥಿನಿಲಯವನ್ನು ತೆರೆಯಲು ಸರ್ಕಾರದವರು ಈ ಹಿಂದೆ ಆದೇಶ ನೀಡಿದ್ದರೂ ಅವುಗಳನ್ನು ಇನ್ನೂ ಪ್ರಾರಂಭಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರದವರು ಈ ವರ್ಷವಾದರೂ ಅವುಗಳನ್ನು ಪ್ರಾರಂಭಿಸುವರೆ;

ಇ) ಹಾಗಿಲ್ಲದಿದ್ದಲ್ಲಿ ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವೆ).—

ಅ, ಮೂಡಿಗೆರೆ ತಾಲ್ಲೂಕ್ ಬಣಕಲ್‌ನಲ್ಲಿ ಒಂದು ವಿದ್ಯಾರ್ಥಿನಿಲಯ ಮಂಜೂರಾಗಿದ್ದು ಈ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿದೆ. ತರೀಕೆರೆ ತಾಲ್ಲೂಕ್ ಲಕ್ಕವಳ್ಳಿಯಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ವಿದ್ಯಾರ್ಥಿನಿಲಯ ಈ ವರ್ಷ ಮಂಜೂರುಮಾಡಲಾಗಿದೆ ಈ ನಿಲಯವನ್ನು ಪ್ರಾರಂಭಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ, ಉದ್ಭವಿಸುವುದಿಲ್ಲ.

ಶ್ರೀ ಪಿ. ತಿಪ್ಪಯ್ಯ.— ಮಾನ್ಯ ಅಧ್ಯಕ್ಷರೇ ತರೀಕೆರೆ ತಾಲ್ಲೂಕ್ ಲಕ್ಕವಳ್ಳಿಯಲ್ಲಿ ಒಂದು ಹರಿಜನ ಗಿರಿಜನ ವರ್ಗದ ವಿದ್ಯಾರ್ಥಿನಿಲಯವನ್ನು ತೆರೆಯಲು ಸರ್ಕಾರದವರು ಹಿಂದೆಯೇ ಆದೇಶ ನೀಡಿದ್ದರೂ. ನನಗೆ ತಿಳಿದಮಟ್ಟಿಗೆ 1983–84ರಲ್ಲಿಯೇ ಇದು ಪ್ರಾರಂಭವಾಗಬೇಕಾಗಿತ್ತು ಆದರೆ ಕೆಲವು ಅಧಿಕಾರಿಗಳ ವಿಳಂಬತನದಿಂದಾಗಿ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಇದು ತಮ್ಮ ಗಮನಕ್ಕೆ ಬಂದಿರುತ್ತದೆಯೇ ? ಎರಡನೆಯದಾಗಿ ಇಲ್ಲಿ ಪರಿಶಿಷ್ಟವರ್ಗ ಜನ ಜಾಸ್ತಿ ಇದ್ದಾರೆ. ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟಜಾತಿ ವರ್ಗದವರಿಗೆ ಹಾಸ್ಟೆಲ್‌ಗಳನ್ನು ತೆಗೆಯಲು ಇತ್ತೀಚೆಗೆ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. 1982–83ನೇ ಸಾಲಿಗೆ ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟವರ್ಗದವರಿಗೆ ಮೆಟ್ರಿಕ್ ಪೂರ್ವ ಪ್ರಾಥಮಿಕ ಬಾಲಕ ಶಾಲೆಗಳನ್ನು ತೆರೆಯಲಾಗಿದೆ. 16–3–84ರಿಂದ ಈಚೆಗೆ ಮೆಟ್ರಿಕ್ ಪೂರ್ವ ಪ್ರಾಥಮಿಕ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡುವುದಕ್ಕೂ ಮತ್ತು ಹೊಸದಾಗಿ ಪರಿಶಿಷ್ಟ ಮತ್ತು ನಿಮ್ನವರ್ಗದ ಹೆಣ್ಣುಮಕ್ಕಳಿಗೂ ವಿದ್ಯಾರ್ಥಿನಿಲಯಗಳನ್ನು ತೆಗೆಯಲು ಈಗತಾನೆ ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಕೆಲವಾರು ದಿನಗಳಲ್ಲಿಯೇ ಪ್ರಾರಂಭಮಾಡಲಾಗುತ್ತದೆ. ಒಟ್ಟಿನಲ್ಲಿ ಈ ರಾಜ್ಯದಲ್ಲಿ 100 ಮೆಟ್ರಿಕ್ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹಿಂದುಳಿದ ಪಂಗಡದವರಿಗೂ ಹಾಸ್ಟೆಲ್‌ಗಳನ್ನು ಮಾಡಬೇಕೆಂದೂ ಕೂಡ ಇದ್ದೇವೆ. ಆಡಳಿತಾತ್ಮಕವಾಗಿ ತೊಂದರೆ ಇರುವುದರಿಂದ ನಿಧಾನವಾಗಿದೆ, ಇನ್ನು ಕೆಲವೇ ದಿವಸಗಳಲ್ಲಿ ಪ್ರಾರಂಭಿಸಲಾಗುತ್ತದೆ.

ವಿಷಯ : ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೆಯ ಹಂತ

ಪ್ರ. ಸಂಖ್ಯೆ 672 (1716) ಶ್ರೀ ಎಸ್. ಎಸ್. ಕಡಪಟ್ಟಿ (ಹುನುಗುಂದ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟಕ್ಕಾಗಿ ಒಂದು ವರ್ಷಕ್ಕೆ 52 ಕೋಟಿ ರೂಪಾಯಿಗಳನ್ನು ಸರ್ಕಾರವು ನಿಗದಿ ಮಾಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟವನ್ನು ಸರ್ಕಾರವು ಯಾವಾಗ ತೆಗೆದುಕೊಳ್ಳುತ್ತದೆ ಮತ್ತು ಸಂಪೂರ್ಣ ಯೋಜನೆಯು ಎಂದು ಪೂರ್ಣಗೊಳ್ಳುವುದು :

ಇ) ಕೃಷ್ಣ ಗೋದಾವರಿ ಆಯೋಗದವರು ನಿಗದಿಪಡಿಸಿದ ನೀರಿನ ಪ್ರಮಾಣವನ್ನು ಸರ್ಕಾರವು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದೆ.ಮತ್ತು ಸದಾ ಕ್ಷಾಮಪೀಡಿತವಾದ ಗುಲ್ಬರ್ಗ, ರಾಯಚೂರು ಬಿಜಾಪುರ ಜಿಲ್ಲೆಗಳಿಗೆ ಕ್ರಿ. ಶ. 2000 ಇಸವಿಯೊಳಗೆ ಸಹಾಯವನ್ನೊದಗಿಸಲು ಉದ್ದೇಶಿಸಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) 1984-85ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗೆ 52.11 ಕೋಟಿ ರೂಪಾಯಿಗಳನ್ನು ನಿಗದಿಮಾಡಿದೆ.

ಆ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟವು ಪೂರ್ಣಗೊಂಡ ನಂತರ ಎರಡನೇ ಘಟ್ಟವನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು.

(ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ಶ್ರೀ ಎಸ್. ಎಸ್. ಕಡಪಟ್ಟಿಯವರ ಪರವಾಗಿ)

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ಮಾನ್ಯ ಅಧ್ಯಕ್ಷರೇ ಇಲ್ಲಿಯವರೆಗೆ ಈ ಯೋಜನೆಗೆ ಒಟ್ಟು ಎಷ್ಟು ಮೊತ್ತ ಖರ್ಚಾಗಿದೆ. ಈ ಯೋಜನೆಯು ಹೀಗೆ ಆಮೆ ವೇಗದಲ್ಲಿ ನಡೆದರೆ ಇನ್ನು ಎಷ್ಟುವರ್ಷಗಳಲ್ಲಿ ಈ ಯೋಜನೆಯು ಮುಗಿಯಬಹುದು ?